# ಶ್ರೀರಾಮಕೃಷ್ಣರ ಕಲಾಕೌಶಲ್ಯ

ಸ್ವರ್ಣಗೌರಿ

ಶ್ರೀರಾಮಕೃಷ್ಣರು ಹುಟ್ಟು ಕಲಾವಿದರು. ಅಂಥ ಮಹಾಚೇತನ ಕೂಡ ಕಲಾತ್ಮಕತೆಯನ್ನು ತನ್ನ ಜೀವನದುದ್ದಕ್ಕೂ ಪ್ರಕಟಪಡಿಸಿದ ಬಗೆಯನ್ನು ಅರಿತುಕೊಳ್ಳುವುದೇ ಒಂದು ರೋಚಕ ಅನುಭವ. ಈ ವಿಷಯವಾಗಿ ಬರೆದಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅನೇಕ ಲೇಖನಗಳನ್ನು ಬರೆದಿರುವ ಅವರು ಕೆಲವು ಗ್ರಂಥಗಳನ್ನೂ ರಚಿಸಿದ್ದಾರೆ.

**ಸ್ವಾ**ಮಿ ವಿವೇಕಾನಂದರು 'ಕಲೆ' ಎಂಬ ತಮ್ಮ ಉಪನ್ಯಾಸದಲ್ಲಿ, ''ನಮ್ಮ ಗುರುಗಳಾದ ಭಗವಾನ್ ಶ್ರೀರಾಮಕೃಷ್ಣರಲ್ಲಿ ಕಲಾವಿದನ ಸ್ವಭಾವ ಪೂರ್ಣ ಪ್ರಕಾಶಕ್ಕೆ ಬಂದಿತ್ತು. ಕಲಾಕೌಶಲ್ಯ ಇಲ್ಲದೇ ಇದ್ದರೆ ಯಾರೂ ನಿಜವಾಗಿ ಆಧ್ಯಾತ್ಮಿಕ ಜೀವಿಗಳಾಗಲಾರರು...'' ಎಂದಿದ್ದಾರೆ. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂ.೭, ಪು. ೩೪೮)*. ಶ್ರೀರಾಮಕೃಷ್ಣರು ಭಾವರಾಜ್ಯದಲ್ಲಿ ವಿಹರಿಸಲು ಅಥವಾ ಸಮಾಧಿಸ್ಥರಾಗಲು ಒಂದು ಸಣ್ಣ ನೆಪ ಸಾಕಿತ್ತು. ಇಂತಹ ಉತ್ತುಂಗ ಆಧ್ಯಾತ್ಮಿಕ ಸ್ಥಿತಿಯಲ್ಲಿದ್ದರೂ ಅವರಲ್ಲಿ ಭಾರತೀಯ ಕಲೆಗಳಾದ ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಅಭಿನಯ ಇತ್ಯಾದಿಗಳು ಪರಿಪೂರ್ಣವಾಗಿ ಅರಳಿ ನಿಂತಿದ್ದವು. ''ಕಲೆ ಸೌಂದರ್ಯವನ್ನು ವ್ಯಕ್ತಗೊಳಿಸಬೇಕು. ಪ್ರತಿಯೊಂದರಲ್ಲಿಯೂ ಒಂದು ಕಲೆ ಇರಬೇಕು. ಅದು ಪ್ರಕೃತಿಯೊಂದಿಗೆ ಸಂಪರ್ಕ ಇಟ್ಟುಕೊಂಡಿರಬೇಕು, ಆದರೂ ಅದನ್ನು ಮೀರಿರಬೇಕು'' ಎನ್ನುತ್ತಾರೆ ಸ್ವಾಮೀಜಿ. *(ಅಲ್ಲೇ.)*

**೧) ಅಭಿನಯ ಕಲೆ:** ಶ್ರೀರಾಮಕೃಷ್ಣರನ್ನು ಬಾಲ್ಯದಲ್ಲಿ ಎಲ್ಲರೂ 'ಗದಾಧರ'ನೆಂದು ಕರೆಯುತ್ತಿದ್ದರು. ಚಿಕ್ಕಂದಿನಿಂದಲೂ ಗದಾಧರನು ಅಭಿನಯ, ಅದರಲ್ಲೂ ಏಕಪಾತ್ರಾಭಿನಯದಲ್ಲಿ ನಿಸ್ಸೀಮನಾಗಿದ್ದನು. ಅನೇಕ ಪಾತ್ರಗಳನ್ನು ಸ್ವರವೈವಿಧ್ಯದ ಮೂಲಕ ಅಭಿನಯಿಸಿ ಎಲ್ಲರನ್ನು ಮುಗ್ಧಗೊಳಿಸುತ್ತಿದ್ದ. ಇತರರ ವಿಚಿತ್ರ ಹಾವಭಾವಗಳನ್ನು, ಮಾತಿನ ಧಾಟಿಯನ್ನು ಎಷ್ಟು ಸೊಗಸಾಗಿ ಅನುಕರಿಸಿ ತೋರಿಸುತ್ತಿದ್ದನೆಂದರೆ ಎಲ್ಲರನ್ನೂ ಹಾಸ್ಯದ ಹೊನಲಿನಲ್ಲಿ ತೇಲಿಸಿಬಿಡುತ್ತಿದ್ದ. ನಾಟಕಪ್ರಿಯ ಗದಾಧರನು ಜನರ ವರ್ತನೆಯನ್ನು ಎಷ್ಟು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದ ಎಂಬುದು ಇದರಿಂದ ತಿಳಿಯುತ್ತದೆ. ಕೆಲವೊಮ್ಮೆ ಸ್ತ್ರೀವೇಷ ಧರಿಸಿ ನಾರಿಯರ ಹಾವಭಾವಗಳನ್ನು ಅಭಿನಯಿಸಿ ತೋರಿಸುತ್ತಿದ್ದನು. ಅಂಥ ಸಂದರ್ಭದಲ್ಲಿ ಅವನ ಹಾವಭಾವ, ಮಾತು, ಚಲನ ವಲನಗಳೆಲ್ಲ ಸಂಪೂರ್ಣ ಸ್ತ್ರೀಯಂತೆಯೇ ಇರುತ್ತಿತ್ತು. ಒಂದೊಂದು ದಿನ ಸ್ತ್ರೀವೇಷ ತೊಟ್ಟು, ಸೊಂಟದ ಮೇಲೆ ಬಿಂದಿಗೆಯನ್ನಿಟ್ಟುಕೊಂಡು ಗಂಡಸರ ಮುಂದೆಯೇ ಹಾಲದಾರಪುಕುರಕ್ಕೆ ನೀರು ತರಲು ಹೋದರೆ ಯಾರಿಗೂ ಪತ್ತೆ ಹಚ್ಚಲಾಗುತ್ತಿರಲಿಲ್ಲ.

ಆ ಗ್ರಾಮದಲ್ಲಿ ಸೀತಾನಾಥ ಪಾಯಿನೆ ಎಂಬ ಶ್ರೀಮಂತ ವೈಶ್ಯನೋರ್ವನು ಗದಾಧರನ ಮನೆಯ ಬಳಿಯೇ ವಾಸಿಸುತ್ತಿದ್ದನು. ಆತನದು ದೊಡ್ಡ ಕುಟುಂಬ. ಸಂಪ್ರದಾಯದಂತೆ ಈ ಮನೆತನದ ಹೆಣ್ಣುಮಕ್ಕಳು ಹೊರಗೆ ಹೋಗುವಂತಿರಲಿಲ್ಲ. ಆದ್ದರಿಂದ ಅವರುಗಳು ಗದಾಧರನನ್ನು ತಮ್ಮ ಮನೆಗೆ ಕರೆದೊಯ್ದು, ಅವನಿಗೆ ಸ್ತ್ರೀವೇಷ ತೊಡಿಸಿ ಅಭಿನಯಿಸಲು ಹೇಳುತ್ತಿದ್ದರು. ಅಭಿ



ನಯದ ಸಮಯದಲ್ಲಿ ಅವನಿಗೆ ಉಪಯುಕ್ತವಾಗಲೆಂದು ಅವರು ಬಂಗಾರದ ಕೊಳಲನ್ನು ಮಾಡಿಸಿದ್ದರು. ಹಾಗೂ ವಿವಿಧ ಪಾತ್ರಗಳಿಗೆ ಬೇಕಾಗುವ ವಿವಿಧ ಸಲಕರಣೆಗಳನ್ನು ಅವರು ಸಿದ್ಧ ಪಡಿಸಿದ್ದರು.

ಅಹಂಕಾರ ಮರ್ದನ: ಆ 'ವ್ಯಾಪಾರಿಗಳ ಗಲ್ಲಿ'ಯಲ್ಲಿ ದುರ್ಗಾದಾಸ ಪಾಯಿನೆ ಎಂಬ ಒಬ್ಬ ವ್ಯಕ್ತಿಯಿದ್ದ. ಅವನು ಕಠೋರ ಸಂಪ್ರದಾಯನಿಷ್ಠ. ಅವನಿಗೆ ಗದಾಧರನ ಮೇಲೆ ಪ್ರೀತಿಯಿದ್ದರೂ ತನ್ನ ಮನೆಯ ಹೆಂಗಸರನ್ನು ಅವನೆಡೆಗೆ ಹೋಗಲು ಬಿಡುತ್ತಿರಲಿಲ್ಲ. ತನ್ನ ಅಂತಃಪುರದ ವಿಚಾರ ಯಾರಿಗೂ ತಿಳಿಯದು, ತನ್ನ ಮನೆಯ ಸ್ತ್ರೀಯರನ್ನು ಯಾರಿಗೂ ನೋಡಲು ಸಾಧ್ಯವಿಲ್ಲ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ.

ಒಂದು ದಿನ ದುರ್ಗಾದಾಸನು ಈ ರೀತಿ ಹೆಮ್ಮೆಪಟ್ಟುಕೊಳ್ಳುತ್ತಿರುವಾಗ ಗದಾಧರನು ಅಲ್ಲಿಯೇ ಇದ್ದ. ಅವನಿದನ್ನು ಕೇಳಿ ಹೇಳಿದ, ''ಸ್ತ್ರೀಯರನ್ನು ಈ ರೀತಿ ರಕ್ಷಿಸಲು ಎಲ್ಲಾದರೂ ಸಾಧ್ಯವೆ? ಉತ್ತಮ ಶಿಕ್ಷಣ ಮತ್ತು ದೈವಭಕ್ತಿಯ ಪ್ರಭಾವದಿಂದ ಮಾತ್ರ ಅವರಿಗೆ ರಕ್ಷಣೆ ದೊರೆಯುತ್ತದೆ. ನಾನು ಇಷ್ಟಪಟ್ಟರೆ ನಿನ್ನ ಮನೆಯೊಳಗೆಲ್ಲ ಹೋಗಿ ಎಲ್ಲ ವಿಷಯವನ್ನು ತಿಳಿದುಬಿಡಬಲ್ಲೆ.'' ದುರ್ಗಾದಾಸನು, ''ಹೇಗೆ ತಿಳಿಯುತ್ತೀಯೊ ನೋಡುತ್ತೇನೆ!'' ಎಂದು ಹೆಮ್ಮೆಯಿಂದ ಸವಾಲು ಹಾಕಿದ. ಗದಾಧರನು, ''ನೋಡುವೆಯಂತೆ!'' ಎಂದು ಹೇಳಿ ಮನೆಗೆ ಹೋದನು.

ಒಂದು ದಿನ ಗದಾಧರನು ಯಾರಿಗೂ ತಿಳಿಸದೆ ಒಂದು ಕೊಳಕು ಸೀರೆಯನ್ನುಟ್ಟು ಒಂದು ಸಾಮಾನ್ಯ ಬೆಳ್ಳಿಯ ಬಳೆಯನ್ನು

ತೊಟ್ಟು ಸೊಂಟದಲ್ಲಿ ಒಂದು ಬುಟ್ಟಿಯನ್ನಿಟ್ಟುಕೊಂಡು ನೆಯಿಗೆ ಹೆಂಗಸಿನಂತೆ ಮುಖಕ್ಕೆ ಸೆರಗು ಹಾಕಿಕೊಂಡು ಸಂಜೆ ನಸುಕಿನ ವೇಳೆಯಲ್ಲಿ ದುರ್ಗಾದಾಸನ ಮನೆಗೆ ಬಂದ. ದುರ್ಗಾದಾಸನು ಮನೆಯ ಜಗಲಿಯ ಮೇಲೆ ಕುಳಿತು ಕೆಲವರ ಹತ್ತಿರ ಮಾತ ನಾಡುತ್ತಿದ್ದ. ಗದಾಧರನು ತಾನು ಗ್ರಾಮಾಂತರದಿಂದ ನೂಲು ಮಾರಲು ಬಂದವಳೆಂದೂ, ತನ್ನೊಡನೆ ಬಂದವರೆಲ್ಲ ಹೊರಟು ಹೋದ್ದರಿಂದ ಇಂದು ರಾತ್ರಿ ಇಲ್ಲಿಯೇ ಉಳಿದುಕೊಳ್ಳಲು ಅವಕಾಶ ಕೊಡಬೇಕೆಂದೂ ಕೇಳಿಕೊಂಡ. ದುರ್ಗಾದಾಸನು ಕೆಲವು ಪ್ರಶ್ನೆ ಗಳನ್ನು ಕೇಳಿ ಒಳಗೆ ಕಳುಹಿಸಿದ. ಒಳಗೆ ಹೋದ ಗದಾಧರ ತನ್ನ ಪರಿಚಯ ಮಾಡಿಸಿ ಅವರೊಡನೆ ಮಧುರ ಸಲ್ಲಾಪದಲ್ಲಿ ತೊಡಗಿದ. ಆ ಸ್ತ್ರೀಯರು ಇವನಿಗೆ ತಿನ್ನಲು ಕೊಟ್ಟು, ಮಲಗುವ ಜಾಗ ತೋರಿಸಿದರು. ತಿಂಡಿ ತಿನ್ನುತ್ತ ಅಂತಃಪುರವನ್ನೆಲ್ಲಾ ಸೂಕ್ಷ್ಮ ವಾಗಿ ಪರಿಶೀಲಿಸಿದ. ಹೀಗೆ ಬಹಳ ಹೊತ್ತು ಕಳೆಯಿತು. ಮಗ ಮನೆಗೆ ಬರಲಿಲ್ಲವೆಂದು ತಾಯಿ ಚಂದ್ರಾದೇವಿ ಮಗ ರಾಮೇಶ್ವರ ನನ್ನು ನೋಡಿಕೊಂಡು ಬರಲು ಕಳುಹಿಸಿದಳು. ರಾಮೇಶ್ವರನು ಅಲ್ಲಿ ಇಲ್ಲಿ ವಿಚಾರಿಸುತ್ತಾ ದುರ್ಗಾದಾಸನ ಮನೆಯ ಬಳಿ ಅವನ ಹೆಸರು ಹಿಡಿದು ಜೋರಾಗಿ ಕೂಗಿದ. ಅಣ್ಣನ ಧ್ವನಿ ಕೇಳಿದ ಗದಾ ಧರ, ''ಇಗೋ ಬಂದೆ!'' ಎಂದು ಹೊರಗೆ ಓಡಿಬಂದಾಗಲೇ ನಿಜ ಸ್ಥಿತಿ ಬಯಲಾಯಿತು. ದುರ್ಗಾದಾಸನಿಗೆ ಮೊದಲು ತನ್ನ ಅಹಂ ಕಾರಕ್ಕೆ ಪೆಟ್ಟು ಬಿದ್ದಂತಾದರೂ ನಂತರ ಬಾಲಕನ ಚಮತ್ಕಾರ ನೆನೆದು ಸಂತೋಷಗೊಂಡ. ಮುಂದೆ ಆ ಮನೆಯ ಮಹಿಳೆಯರಿಗೂ ಗದಾಧರನ ವಿಚಾರದಲ್ಲಿ ಸ್ವಾತಂತ್ರ್ಯ ದೊರೆಯಿತು. *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ. ೧, ಪು..೬೮)*

**ಸ್ತ್ರೀಯರ ಹಾವಭಾವಗಳ ಅನುಕರಣೆ:** ಶ್ರೀರಾಮಕೃಷ್ಣರ ಸ್ತ್ರೀಸಹಜವಾದ ಹಾವಭಾವಗಳ ಅನುಕರಣೆ ಅದೆಷ್ಟು ವಾಸ್ತವ ವಾಗಿರುತ್ತಿತ್ತು ಎಂಬುದನ್ನು ಭಕ್ತೆಯೋರ್ವಳು ಹೀಗೆಂದು ಹೇಳು ತ್ತಾಳೆ: ''ಒಂದು ದಿನ ಸ್ತ್ರೀಯರ ಮುಂದೆ ಶ್ರೀರಾಮಕೃಷ್ಣರು ಸ್ತ್ರೀಯರು ಪುರುಷರನ್ನು ಕಂಡಾಗ ಯಾವ ರೀತಿ ಹಾವಭಾವ ಗಳನ್ನು ಮಾಡುತ್ತಾರೆ ಎಂಬುದನ್ನು ತೋರಿಸತೊಡಗಿದರು. ಮುಸು ಕನ್ನು ಎಳೆಯುವುದು, ಕಿವಿಯ ಹತ್ತಿರ ಕೂದಲನ್ನು ಸರಿಸುವುದು, ಎದೆಯ ಮೇಲೆ ಸೆರಗನ್ನು ಎಳೆಯುವುದು — ಎಲ್ಲ ಯಥಾ ವತ್ತಾಗಿ ಅಭಿನಯಿಸಿ ತೋರಿಸಿದರು. ನಮಗೆ ನೋಡಿ ನಗು ಬಂತು. ಆದರೆ ಮನಸ್ಸಿನೊಳಗೆ ನಾಚಿಕೆಯುಂಟಾಯಿತು. ಸ್ತ್ರೀಯರನ್ನು ನಿಂದಿಸುತ್ತಿದ್ದಾರೆಂದು ಮನಸ್ಸಿಗೆ ವೇದನೆಯೂ ಆಯಿತು. ಸ್ತ್ರೀಯ ರೆಲ್ಲ ಹೀಗೆಯೇ ಏನು? ಎಷ್ಟಾದರೂ ನಾವು ಸ್ತ್ರೀಯರು, ಯಾರಾ ದರೂ ಸ್ತ್ರೀಯರನ್ನು ಟೀಕಿಸಿದರೆ ನೋವಾಗುವುದು ಸಹಜ. ಕೂಡಲೆ ಶ್ರೀರಾಮಕೃಷ್ಣರಿಗೆ ನಮ್ಮ ಮನಸ್ಸಿನ ಆಲೋಚನೆ ತಿಳಿದು, 'ನಿಮ್ಮ ಬಗ್ಗೆ ನಾನು ಹೇಳುತ್ತಿಲ್ಲ. ನೀವು ಅವಿದ್ಯಾಶಕ್ತಿಯವರಲ್ಲ. ಅವಿದ್ಯಾಶಕ್ತಿಯವರೇ ಆ ರೀತಿ ಮಾಡುವುದು' ಎಂದರು ಕೂಡಲೇ.'' *(ಅಲ್ಲೇ, ಪು. ೩೮೫)*

ಮುಂದೆ ಶ್ರೀರಾಮಕೃಷ್ಣರು ರಾಣಿ ರಾಸಮಣಿಯ ದೇವಸ್ಥಾನ ದಲ್ಲಿ ಅರ್ಚಕರಾಗಿದ್ದಾಗಿನ ಘಟನೆ. ಶ್ರೀರಾಮಕೃಷ್ಣರ ರಸದ್ದಾರ ನಾದ ಮಥುರನಾಥನ ಪತ್ನಿ ಜಗದಂಬಾ ಒಮ್ಮೆ ಸ್ತ್ರೀಯರ ಉಡು ಪನ್ನು ಧರಿಸಿದ್ದ ಶ್ರೀರಾಮಕೃಷ್ಣರಿಗೆ ತನ್ನ ಬೆಲೆಬಾಳುವ ಒಡವೆಗಳ ನ್ನೆಲ್ಲಾ ತೊಡಿಸಿ ದುರ್ಗಾಮಾತೆಗೆ ಚಾಮರ ಸೇವೆ ಮಾಡಲು ಕರೆದೊಯ್ದಳು. ದೂರದಿಂದ ಆರತಿಯನ್ನು ವೀಕ್ಷಿಸುತ್ತಿದ್ದ ಮಥುರ ನಾಥನು ಯಾರೋ ಶ್ರೀಮಂತ ಮಹಿಳೆ ಚಾಮರ ಬೀಸುತ್ತಿರುವ ರೆಂದುಕೊಂಡು ನಂತರ ಪತ್ನಿಯನ್ನು ಆಕೆ ಯಾರೆಂದು ವಿಚಾರಿಸಿದ. ಶ್ರೀರಾಮಕೃಷ್ಣರು ಎಂದು ತಿಳಿದಾಗ ಅಚ್ಚರಿಪಟ್ಟನು! ದಿನನಿತ್ಯದ ಒಡನಾಡಿಗೂ ಶ್ರೀರಾಮಕೃಷ್ಣರನ್ನು ಕಂಡುಹಿಡಿಯಲು ಆಗಲಿಲ್ಲ. *(ದೇವರೊಡನೆ ಬಾಳಿದವರು, ಸಂ.೨, ಪು. ೪೬)*

**೨) ನಾಟಕ ಕಲೆ:** ಆಗ ಗ್ರಾಮದಲ್ಲಿ ಮೂರು ನಾಟಕ ತಂಡ ಗಳು, ಒಂದು ಬಾವುಲರ ತಂಡ ಮತ್ತು ಒಂದು ಕವಿಗಳ ತಂಡ ಇದ್ದವು. ಅಲ್ಲಿ ಅನೇಕ ವೈಷ್ಣವರಿದ್ದುದರಿಂದ ಅವರ ಮನೆಗಳಲ್ಲಿ ಪ್ರತಿದಿನ ಭಾಗವತ ಪಠನ ಮತ್ತು ಸಂಕೀರ್ತನೆಗಳು ನಡೆಯು ತ್ತಿದ್ದವು. ಗದಾಧರನು ಚಿಕ್ಕಂದಿನಿಂದಲೂ ಇವುಗಳನ್ನು ಕೇಳುತ್ತಿದ್ದ ಮತ್ತು ಅವನದೇ ಆದ ಪ್ರತಿಭೆಯೂ ಇತ್ತು. ಹೀಗಾಗಿ ಈ ಗಾನ ಸಂಕೀರ್ತನಗಳನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದ. ಒಂದು ದಿನ ಬಾವುಲರ ಹಾಡು ಹೇಳುತ್ತಿದ್ದ, ಇನ್ನೊಂದು ದಿನ ಯಾವು ದಾದರೂ ನಾಟಕದ ಪಾತ್ರವನ್ನು ಅಭಿನಯಿಸುತ್ತಿದ್ದ, ಮತ್ತೊಂದು ದಿನ ವೈಷ್ಣವರ ಸಂಕೀರ್ತನೆಯನ್ನು ಹಾಡುತ್ತಿದ್ದ.

ಆ ಸಂದರ್ಭದಲ್ಲಿ ನಡೆದ ಒಂದು ಘಟನೆ ಅವನ ವಿದ್ಯಾ ಭ್ಯಾಸವನ್ನು ನಿಲ್ಲಿಸಿಬಿಡಲು ಸಹಾಯಕವಾಯಿತು. ಅವನ ಗೆಳೆಯ ರೆಲ್ಲಾ ಸೇರಿಕೊಂಡು ಒಂದು ನಾಟಕದ ತಂಡವನ್ನು ಪ್ರಾರಂಭಿಸ ಬೇಕೆಂದು ನಿರ್ಧರಿಸಿದರು. ಪ್ರತಿದಿನ ಶಾಲೆಗೆ ಗೈರು ಹಾಜರಾಗಿ, ಅಭಿನಯವನ್ನು ಅಭ್ಯಾಸ ಮಾಡುವುದೆಂದು ತೀರ್ಮಾನಿಸಿದರು. ಗದಾಧರನು ಅಭಿನಯ ಪಟುವಾದ್ದರಿಂದ ನಿರ್ದೇಶನದ ಕೆಲಸ ವನ್ನು ವಹಿಸಿಕೊಳ್ಳಬೇಕೆಂದು ಒತ್ತಾಯಿಸಿದರು. ಗದಾಧರನು ಒಪ್ಪಿ ಕೊಂಡ. ರಹಸ್ಯ ಜಾಗದಲ್ಲಿ ನಿರ್ದೇಶನ ನಡೆಯಬೇಕೆಂದು ಆಲೋ ಚಿಸಿ ಮಾಣಿಕರಾಜನ ಮಾವಿನ ತೋಪನ್ನು ಆರಿಸಿಕೊಂಡರು. ಹೀಗೆ ನಾಟಕಾಭ್ಯಾಸ ಪ್ರಾರಂಭವಾಯಿತು. ಶ್ರೀಕೃಷ್ಣನ ಜೀವನಕ್ಕೆ ಸಂಬಂಧಿಸಿದ ಪ್ರಸಂಗಗಳು ಗದಾಧರನಿಗೆ ಮೆಚ್ಚುಗೆಯಾದವು. ಗೌರವರ್ಣದ, ಉದ್ದನೆಯ ಕೇಶರಾಶಿಯ, ಕೊರಳಲ್ಲಿ ಹಾರ ಧರಿ ಸಿದ ಅವನು, ಕೈಯಲ್ಲಿ ಕೊಳಲನ್ನು ಹಿಡಿದಿದ್ದರೆ ಸಾಕ್ಷಾತ್ ಶ್ರೀಕೃಷ್ಣ ನಂತೆಯೇ ಕಾಣುತ್ತಿದ್ದನು. ಇಂತಹ ನಾಟಕಗಳ ದೃಶ್ಯಗಳಲ್ಲಿ ಮೇರೆ ಮೀರಿದ ಭಾವೋದ್ರೇಕದಿಂದ ಮೈಮರೆತು ಬಾಹ್ಯಪ್ರಜ್ಞೆ ಕಳೆದು ಕೊಳ್ಳುತ್ತಿದ್ದನು. ಕೆಲವು ಸಲ ಇಡೀ ಮಾವಿನ ತೋಪು ಇವರ ಸಾಮೂಹಿಕ ಸಂಕೀರ್ತನೆಯಿಂದ ಅನುರಣಿಸುತ್ತಿತ್ತು. ಶ್ರೀರಾಮ, ಶ್ರೀಕೃಷ್ಣರ ಕಥೆಗಳನ್ನು ಅವಲಂಬಿಸಿದ ನಾಟಕಗಳನ್ನು ಹಳ್ಳಿಯ ಬೇರೆ ಬೇರೆ ಭಾಗಗಳಲ್ಲಿ ಆಡತೊಡಗಿದರು. ಕ್ರಮೇಣ ಗದಾಧರ ನಿಗೆ ಶಾಲೆಯ ಅಭ್ಯಾಸದಲ್ಲಿ ಆಸಕ್ತಿ ಕಡಿಮೆಯಾಯಿತು.

*(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ. ೧, ೭೨)*


ಒಮ್ಮೆ ಶಿವರಾತ್ರಿಯ ದಿನ ಮಧ್ಯರಾತ್ರಿಯಲ್ಲಿ ಜಾತ್ರೆ (ನಾಟಕ) ಪ್ರಾರಂಭವಾಗಬೇಕಿತ್ತು. ಸಂಜೆಯ ಹೊತ್ತಿಗೆ ಶಿವನ ಪಾತ್ರ ವಹಿಸ ಬೇಕಾಗಿದ್ದ ಬಾಲಕನಿಗೆ ಕಾಯಿಲೆಯಾದ ಕಾರಣ ಗದಾಧರ ಶಿವನ ಪಾತ್ರ ವಹಿಸಬೇಕಾಯಿತು. ಶಿವನ ಸಂಭಾಷಣೆ ಮೆಲುಕು ಹಾಕು

ತ್ತಿರುವಾಗಲೆ ಭಕ್ತಿಭಾವ ಜಾಗ್ರತವಾಗಿ ವೇದಿಕೆಯ ಮೇಲೆ ಬರುವ ಹೊತ್ತಿಗೆ, ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಸುತ್ತಾ ನಿಶ್ಚಲನಾಗಿ ನಿಂತುಬಿಟ್ಟಿದ್ದಾನೆ. ಏನೇ ಮಾಡಿದರೂ ಆ ದಿನ ರಾತ್ರಿಯಿಡೀ ಬಾಹ್ಯ ಪ್ರಜ್ಞೆಯೇ ಮೂಡಲಿಲ್ಲ! *(ಅಲ್ಲೇ, ಪು.೧೦೭)*

**೩) ಚಿತ್ರಕಲೆ:** ಬಾಲಕ ಗದಾಧರನು ಚಿತ್ರಕಲೆಯಲ್ಲಿಯೂ ನಿಷ್ಣಾತನಾಗಿದ್ದನು. ಒಮ್ಮೆ ಗೌರಹಾಟಿ ಗ್ರಾಮದ ತನ್ನ ಸೋದರಿ ಸರ್ವಮಂಗಳೆಯ ಮನೆಗೆ ಹೋಗಿದ್ದನು. ಮನೆಯ ಒಳಗೆ ಪ್ರವೇಶಿಸುತ್ತಿದಂತೆಯೇ ಅವನಿಗೊಂದು ದೃಶ್ಯ ಕಾಣಿಸಿತು. ಅವನ ಸಹೋದರಿ ಪ್ರಸನ್ನವದನಳಾಗಿ ತನ್ನ ಪತಿಯ ಸೇವೆ ಮಾಡುತ್ತಿರುವುದು ಅವನ ಮನಸ್ಸಿನ ಮೇಲೆ ಅಚ್ಚೊತ್ತಿತ್ತು. ಕೆಲವು ದಿನಗಳ ನಂತರ ಅದೇ ದೃಶ್ಯದ ಚಿತ್ರ ಬಿಡಿಸಿದ. ಆ ಚಿತ್ರದ ಸಾದೃಶ್ಯವನ್ನು ಕಂಡು ಎಲ್ಲರೂ ಬೆರಗಾಗಿದ್ದರು. *(ಅಲ್ಲೇ, ಪು.೭೩)*

ಮುಂದೊಂದು ದಿನ ಶ್ರೀಮಾತೆಯವರಿಗೆ ಯೋಗಶಾಸ್ತ್ರದಲ್ಲಿ ಹೇಳಿರುವ ಷಟ್‌ಚಕ್ರಗಳ ಕುರಿತು ವಿವರಿಸುತ್ತಾ ತಮ್ಮ ಕೈಯಿಂದಲೇ ಕುಲಕುಂಡಲಿನಿ ಚಿತ್ರ ಬಿಡಿಸಿ ತೋರಿಸಿದ್ದರೆಂದು ಶ್ರೀಮಾತೆಯವರೇ ಹೇಳಿದ್ದಾರೆ. ಆದರೆ ದುರದೃಷ್ಟವಶಾತ್ ಈ ಎರಡೂ ಚಿತ್ರಗಳು ಕಳೆದುಹೋಗಿವೆ.

ಗಂಟಲು ಕ್ಯಾನ್ಸರ್‌ನಿಂದ ನರಳುತ್ತಾ ಕಾಶೀಪುರ ತೋಟದ ಮನೆಯಲ್ಲಿ ಇದ್ದಾಗ, ಒಂದು ದಿನ ಶ್ರೀರಾಮಕೃಷ್ಣರು ತಮ್ಮ ಮಹಾಸಮಾಧಿಗೆ ಮುನ್ನ ನರೇಂದ್ರನನ್ನು (ಮುಂದೆ ಸ್ವಾಮಿ ವಿವೇಕಾನಂದರು) ಕರೆದು ಬಳಿಯಲ್ಲಿ ಕೂರಿಸಿಕೊಂಡರು. ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಒಂದು ಕಾಗದದ ಮೇಲೆ, ''ನರೇಂದ್ರನು ಇತರರಿಗೆ ಶಿಕ್ಷಣ ನೀಡುತ್ತಾನೆ'' ಎಂದು ಬರೆದರು. ನರೇಂದ್ರನು ತಾನು ಆ ಕೆಲಸ ಮಾಡುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದಾಗ ಶ್ರೀರಾಮಕೃಷ್ಣರು, 'ನೀನು ಮಾಡಲೇಬೇಕಾಗುತ್ತದೆ... ನನ್ನ ಶಕ್ತಿಯು ನಿನ್ನಲ್ಲಿ ವ್ಯಕ್ತವಾಗುತ್ತದೆ' ಎಂದರು.



ಶ್ರೀರಾಮಕೃಷ್ಣರು ಬರೆದ ಚಿತ್ರ

ಮೇಲಿನ ಚಿತ್ರದಲ್ಲಿ, ''ಜಯ ರಾಧೇ ಪ್ರೇಮಮಯಿ. ನರೇನ್ ನರೇನ್ ಶಿಕ್ಷೇ ದೀಬೇ ಜೊಖೊನ್ ಘುರೆ ಬಾಹಿರೆ ಹೋಕ್ ದೀಬೇ ಜಯ ರಾಧೇ'' ಎಂದು ಶ್ರೀರಾಮಕೃಷ್ಣರು (ಬಂಗಾಳಿಯಲ್ಲಿ) ಬರೆದಿದ್ದಾರೆ.

ಇದರ ಅರ್ಥ, ''ಜಯ ರಾಧೆ, ಪ್ರೇಮಮಯಿ. ನರೇನ್ ಹೊರಗೆಲ್ಲ ಸಂಚರಿಸುತ್ತ ಇತರರಿಗೆ ಶಿಕ್ಷಣ ನೀಡುವನು, ಭಾರತದ ಹೊರಗೂ ಶಿಕ್ಷಣ ನೀಡುವನು. ಜಯ ರಾಧೇ.''

ಈ ಚಿತ್ರದಲ್ಲಿ ಕಾಣಿಸುವ ತಲೆ ಸ್ವತಃ ತಮ್ಮದೇ ಚಿತ್ರವೆಂದೂ, ಅದರಲ್ಲಿ ಗಂಟಲಲ್ಲಿ ಕಾಣಿಸುವ ಕಲೆ ತಮ್ಮ ಕ್ಯಾನ್ಸರನ್ನು ಸೂಚಿಸುತ್ತದೆ ಎಂದೂ, ಅಲ್ಲಿರುವ ನವಿಲು ನರೇಂದ್ರನೆಂದೂ ಭಾವಿಸಬಹುದಾಗಿದೆ. ಕೆಲವರ ಪ್ರಕಾರ ತಲೆ ನರೇಂದ್ರನನ್ನು ಸೂಚಿಸುತ್ತದೆ, ಹಾಗೂ ನವಿಲು ಅಸಂಖ್ಯಾತ ಮಂದಿ ಅನುಯಾಯಿಗಳ ಪ್ರತೀಕ. ಶ್ರೀರಾಮಕೃಷ್ಣರು ಬರೆದ ಮೂರು ಚಿತ್ರಗಳಲ್ಲಿ ಈ ಚಿತ್ರವೊಂದೇ ದೊರೆತಿದೆ.

**೪) ಶಿಲ್ಪಕಲೆ:** ಮೂರ್ತಿ ಮಾಡುವುದರಲ್ಲಿಯೂ ಗದಾಧರನು ಸಾಕಷ್ಟು ಪಳಗಿದ್ದ. ಕಾರಣ ಅವನ ಧರ್ಮಪ್ರವೃತ್ತಿಗೆ ಅದು ಪೂರಕವಾಗಿತ್ತು. ಅನೇಕ ದೇವದೇವಿಯರ ಮೂರ್ತಿಯನ್ನು ತಯಾರಿಸಿ ತನ್ನ ಗೆಳೆಯರೊಡನೆ ಪೂಜೆಯಲ್ಲಿ ತಲ್ಲೀನನಾಗುತ್ತಿದ್ದ. ಗ್ರಾಮದ ಕುಂಬಾರನು ಶಿವ, ದುರ್ಗೆ ಮುಂತಾದ ವಿಗ್ರಹಗಳನ್ನು ಮಾಡುತ್ತಿದ್ದರೆ, ಗದಾಧರನು ತನ್ನ ಸ್ನೇಹಿತರೊಡನೆ ಓಡಾಡುತ್ತಾ ಅಲ್ಲಿಗೆ ಹೋಗಿ, ಆ ಮೂರ್ತಿಗಳನ್ನು ಸರಿಯಾಗಿ ಪರಿಶೀಲಿಸಿ ಹೇಳುತ್ತಿದ್ದ, ''ಇದೇನಿದು? ದೇವತೆಯ ಕಣ್ಣು ಹೀಗಿರುತ್ತದೆಯೆ? ಹೀಗೆ ಇದನ್ನು ಬಿಡಿಸಬೇಕು,'' ಎಂದು ಕಣ್ಣಿನಲ್ಲಿ ಹೇಗೆ ದಿವ್ಯಭಾವವನ್ನು ವ್ಯಕ್ತಪಡಿಸಬೇಕು ಎಂಬುದನ್ನು ತೋರಿಸಿಕೊಡುತ್ತಿದ್ದನು. ಈ ಬಾಲಕನಿಗೆ ಯಾವ ಶಿಕ್ಷಣವೂ ಇಲ್ಲದೆ ಈ ವಿಷಯಗಳೆಲ್ಲ ಹೇಗೆ ತಿಳಿಯಿತು ಎಂದು ಎಲ್ಲರೂ ಆಶ್ಚರ್ಯಚಕಿತರಾಗುತ್ತಿದ್ದರು.

ಇನ್ನೊಮ್ಮೆ ಮಕ್ಕಳೊಡನೆ ಆಟವಾಡುತ್ತಿರುವಾಗ ಪೂಜೆಯ ಸಲುವಾಗಿ ಒಂದು ದೇವತೆಯ ಮೂರ್ತಿಯನ್ನು ನಿರ್ಮಿಸಿದನು. ಅದು ಎಷ್ಟು ಸುಂದರವಾಗಿತ್ತೆಂದರೆ ಯಾರೋ ಪ್ರಸಿದ್ಧ ಶಿಲ್ಪಿ ಇದನ್ನು ನಿರ್ಮಿಸಿರಬೇಕೆಂದು ಎಲ್ಲರೂ ಭಾವಿಸುವಂತಿತ್ತು. *(ಅಲ್ಲೇ, ಪು.೧೦೭)*

ಶ್ರೀರಾಮಕೃಷ್ಣರ ಮೃದುಸ್ವಭಾವ, ಶುದ್ಧಹೃದಯ, ಸರಳ ನಡತೆ ಇವುಗಳಿಂದ ಮಥುರನಾಥನು ತುಂಬಾ ಪ್ರಭಾವಿತನಾಗಿದ್ದನು. ದೇವಾಲಯದಲ್ಲಿ ಯಾವುದಾದರೂ ಕೆಲಸದಲ್ಲಿ ಅವರನ್ನು ತೊಡಗಿಸಬೇಕೆಂದು ಆತನ ಆಸೆಯು ನೆರವೇರಲಿಲ್ಲ. ಒಂದು ದಿನ ಶ್ರೀರಾಮಕೃಷ್ಣರು ತಮ್ಮ ಕೈಯಿಂದಲೇ ಗಂಗಾತಟದ ಜೇಡಿಮಣ್ಣಿನಿಂದ ಶಿವನ ವಿಗ್ರಹವೊಂದನ್ನು ಮಾಡಿ ಅದನ್ನು ಪೂಜಿಸ ತೊಡಗಿದರು. ತಿರುಗಾಡುತ್ತಾ ಅಲ್ಲಿಗೆ ಬಂದ ಮಥುರನಾಥನು ಅದನ್ನು ನೋಡಿ ಪೂಜೆ ಮುಗಿದ ಮೇಲೆ ಆ ವಿಗ್ರಹವನ್ನು ತನಗೆ ತಂದು ಕೊಡುವಂತೆ ಹೃದಯ (ಶ್ರೀರಾಮಕೃಷ್ಣರ ಸೋದರಳಿಯ) ನಿಗೆ ಹೇಳಿದನು; ವಿಗ್ರಹವನ್ನು ರಾಣಿ ರಾಸಮಣಿಗೂ ತೋರಿಸಿದನು. ಇಬ್ಬರಿಗೂ ಅವರ ಕಲಾಪ್ರತಿಭೆ ಹಾಗೂ ಭಕ್ತಿಯನ್ನು ಕಂಡು ಅಚ್ಚರಿಯಾಯಿತು. *(ದೇವರೊಡನೆ ಬಾಳಿದವರು, ಸಂ.೨, ಪು. ೩೪)*

ಇದಾದ ಮೇಲೆ ಮಥುರನಾಥನು ತಾನೇ ಶ್ರೀರಾಮಕೃಷ್ಣರ ಬಳಿಗೆ ಹೋಗಿ ಜಗನ್ಮಾತೆಯ ವಿಗ್ರಹಕ್ಕೆ ಅಲಂಕಾರ ಮಾಡುವ ಕೆಲಸದಲ್ಲಿ ಅಣ್ಣನಿಗೆ ನೆರವಾಗಬೇಕೆಂದು ಕೇಳಿಕೊಂಡನು. ಹೃದಯನೇ ಜಗನ್ಮಾತೆಯ ಆಭರಣಗಳ ಜವಾಬ್ದಾರಿ ಹೊರುವುದಾದರೆ ಮಾತ್ರ ಎಂಬ ಷರತ್ತಿನ ಮೇಲೆ ಕೊನೆಗೂ ಒಪ್ಪಿದರು.

ಸೇವೆಗೆ ಸೇರಿದ ಸ್ವಲ್ಪ ಸಮಯದ ನಂತರ ಒಂದು ಪ್ರಸಂಗ ನಡೆಯಿತು. ರಾಧಾಕಾಂತ ದೇವಾಲಯದ ಅರ್ಚಕನು ಕೃಷ್ಣ ವಿಗ್ರಹವನ್ನು ಶಯನಗೃಹಕ್ಕೆ ತೆಗೆದುಕೊಂಡು ಹೋಗುತ್ತಿದ್ದಾಗ ಜಾರಿಬಿದ್ದು ಮೂರ್ತಿಯ ಕಾಲು ಮುರಿದುಹೋಯಿತು. ಭಿನ್ನವಾದ ಮೂರ್ತಿಯನ್ನು ಪೂಜೆ ಮಾಡುವುದು ಶಾಸ್ತ್ರವಿರುದ್ಧ ವೆಂದರು ಪಂಡಿತರು. ಅರೆಪ್ರಜ್ಞಾವಸ್ಥೆಯಲ್ಲಿದ್ದ ಶ್ರೀರಾಮಕೃಷ್ಣರು ಮಾತ್ರ, ''ರಾಣಿಯ ಅಳಿಯಂದಿರಲ್ಲಿ ಯಾರಾದರೂ ಬಿದ್ದು ಕಾಲು ಮುರಿದುಕೊಂಡರೆ ಅವಳು ಅವನನ್ನು ಬಿಟ್ಟು ಬೇರೆ ಅಳಿಯನನ್ನು ತರುತ್ತಾಳೆಯೆ? ಬದಲಿಗೆ ವೈದ್ಯರನ್ನು ಕರೆಸಿ ಅವನ ಮುರಿದ ಕಾಲನ್ನು ಸರಿಪಡಿಸುವುದಿಲ್ಲವೆ?'' ಎಂದರು. ಇದನ್ನು ಕೇಳಿದ ರಾಣಿಗೆ ಎಣೆಯಿಲ್ಲದಷ್ಟು ಸಂತೋಷ. ಶ್ರೀ ರಾಮಕೃಷ್ಣರೇ ಕುಶಲತೆ ಯಿಂದ ಸ್ವಲ್ಪವೂ ಐಬು ಕಾಣದಂತೆ ವಿಗ್ರಹದ ಕಾಲನ್ನು ಕೂಡಿ ಕೊಟ್ಟರು. ಎಷ್ಟು ಚೆನ್ನಾಗಿ ಕೂಡಿಸಿದ್ದರೆಂದರೆ ಜಾಗರೂಕತೆಯಿಂದ ಪರೀಕ್ಷಿಸಿದರೂ ಅದು ಮುರಿದು ಹೋಗಿದ್ದ ಜಾಗವೇ ಕಂಡು ಬರುತ್ತಿರಲಿಲ್ಲ. *(ಶ್ರೀರಾಮಕೃಷ್ಣರ ಲೀಲಾಪ್ರಸಂಗ, ಸಂ. ೧, ಪು.೧೩೫)*

**೫) ಹಾಸ್ಯಕಲೆ:** ಅಭಿನಯದಲ್ಲಿ ತನ್ಮಯನಾಗಿ ಭಾವಸಮಾಧಿಗೆ ಹೋಗುತ್ತಿದ್ದ ಗದಾಧರನಲ್ಲಿ ಹಾಸ್ಯರಸವೂ ತುಂಬಿ ತುಳುಕು ತ್ತಿತ್ತು ಎಂಬುದು ಆಶ್ಚರ್ಯಕರವೇ ಸರಿ. ಗ್ರಾಮದ ಕೆಳಸ್ತರದ ಅನೇಕರಿಗೆ ರಾಮಾಯಣ ಮಹಾಭಾರತಗಳನ್ನು ಓದುವುದು ಬರುತ್ತಿರಲಿಲ್ಲ. ಅವನ್ನು ಕೇಳಬೇಕೆಂದು ಇಚ್ಛೆಯಾದರೆ ಅವರು ಯಾರಾದರೂ ಬ್ರಾಹ್ಮಣನನ್ನೊ ಅಥವಾ ಬೇರೆ ಉಚ್ಚ ಜಾತಿಯವ ನನ್ನೊ ಕರೆಸಿ ಓದಿಸುತ್ತಿದ್ದರು. ಅವನು ಬಂದಾಗ ಅವರು ಬಹಳ ಭಕ್ತಿ ಗೌರವದಿಂದ ಸ್ವಾಗತಿಸಿ ಕಾಲು ತೊಳೆಯುವುದಕ್ಕೆ ನೀರು ಕೊಟ್ಟು, ಅನಂತರ ತಾಂಬೂಲವನ್ನು ನೀಡಿ ಆಸನದಲ್ಲಿ ಕುಳ್ಳಿರಿಸು ತ್ತಿದ್ದರು. ಆ ರೀತಿ ಸನ್ಮಾನ ಪಡೆದ ಆ ವ್ಯಕ್ತಿಗೆ ತನ್ನ ಸಮಾನ ಯಾರು ಇಲ್ಲ ಈ ಪ್ರಪಂಚದಲ್ಲಿ ಎಂಬ ಹೆಮ್ಮೆ. ಬಹಳ ಧಿಮಾಕಿನಿಂದ ಆಸನದ ಮೇಲೆ ಕುಳಿತು ಏನೇನೋ ನಟನೆ ಮಾಡುತ್ತ ಪುರಾಣಕಥೆಯನ್ನು ಓದುವ ಭಂಗಿಯನ್ನು ಗದಾಧರ ಸೂಕ್ಷ್ಮವಾಗಿ ಪರಿ ಶೀಲಿಸುತ್ತಿದ್ದ. ಆನಂತರ ಆ ವ್ಯಕ್ತಿಯ ಪಾಠದ ಕ್ರಮವನ್ನು ಅಭಿನಯಿಸಿ ತೋರಿಸಿ ಇತರರನ್ನು ಹಾಸ್ಯದ ಹೊನಲಿನಲ್ಲಿ ತೇಲಿಸುತ್ತಿದ್ದ. *(ಅಲ್ಲೇ, ಪು.೧೧೦)*

'ವ್ಯಾಪಾರಿಗಳ ಗಲ್ಲಿ'ಯಲ್ಲಿ ವಾಸಿಸುತ್ತಿದ್ದ ಸೀತಾನಾಥ ಪಾಯಿ ನೆಯ ಮಗಳು ಅರವತ್ತು ವರ್ಷ ವಯಸ್ಸಿನ ರುಕ್ಮಿಣಿ ತನ್ನ ನೆನಪಿನ ಬುತ್ತಿ ಬಿಚ್ಚುತ್ತಾ ಹೀಗೆನ್ನುತ್ತಾಳೆ: ''ಗದಾಧರನು ನಮ್ಮ ಮನೆಗೆ ಬಂದು ಎಷ್ಟೋ ಪುರಾಣಕಥೆಗಳನ್ನು ಪಠಿಸುತ್ತಿದ್ದ, ಹಾಸ್ಯ ವಿನೋದ ಗಳ ಮೂಲಕ ನಮ್ಮನ್ನು ನಗಿಸುತ್ತಿದ್ದ. ಇವನ್ನೆಲ್ಲ ಕೇಳುತ್ತಾ ನಾವು ಮನೆಗೆಲಸ ಮಾಡುತ್ತಿದ್ದವು. ಅವನು ನಮ್ಮೊಡನಿದ್ದಾಗ ಎಂತಹ ಆನಂದವಾಗುತ್ತಿತ್ತು ಎಂಬುದನ್ನು ನಾನು ವಿವರಿಸಿ ಹೇಳಲಾರೆ! ಒಂದು ದಿನ ಬರದಿದ್ದರೆ ಚಡಪಡಿಸುತ್ತಿತ್ತು ಮನಸ್ಸು. ಅಂದು ಏನಾ ದರೂ ನೆವದಿಂದ ಚಂದ್ರಾದೇವಿಯ ಬಳಿಗೆ ಹೋಗಿ ವಿಷಯ ತಿಳಿಯುವವರೆಗೂ ಮನಶ್ಶಾಂತಿ ಇರುತ್ತಿರಲಿಲ್ಲ. ಅವನ ಪ್ರತಿಯೊಂದು ಮಾತು ನಮಗೆ ಅಮೃತ ಸಮಾನವಾಗಿತ್ತು ...'' *(ಅಲ್ಲೇ, ಪು.೨೦)*

ಮುಂದೆ ಭಕ್ತರು ಬರಲಾರಂಭಿಸಿದಾಗ ಶ್ರೀರಾಮಕೃಷ್ಣರು ಆಧ್ಯಾತ್ಮಿಕ ತತ್ತ್ವಗಳನ್ನು ಹಾಸ್ಯರಸದ ದ್ರವದಲ್ಲಿ ನೆನಸಿ ಅದು ಹೇಗೆ ಕೊಡುತ್ತಿದ್ದರೆಂದರೆ, ಭಕ್ತರು ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದರು. ಒಮ್ಮೆ ಅವರು ಕೀರ್ತನಕಾರ್ತಿಯರ ಹಾವಭಾವಗಳನ್ನು ತೋರಿಸು ತ್ತಿದ್ದರು. ಆಕೆ ಯಾವ ರೀತಿಯಾಗಿ ಒಡವೆ ವಸ್ತ್ರಗಳಿಂದ ಅಲಂಕಾರ ಮಾಡಿಕೊಂಡು ಹಾಡುವುದಕ್ಕೆ ಬರುತ್ತಾಳೆ, ಹೇಗೆ ನಿಂತುಕೊಳ್ಳು ತ್ತಾಳೆ, ಹೇಗೆ ಕೈಯಲ್ಲಿ ಕರವಸ್ತ್ರ ಹಿಡಿದು ಕೊಳ್ಳುತ್ತಾಳೆ, ಹೇಗೆ ಆಗಾಗ ಬೇಕೂ ಅಂತ ಕೆಮ್ಮುತ್ತಾಳೆ, ಮುಕುರವನ್ನು ಒಂದು ಕಡೆಗೆ ತಳ್ಳಿ ಮೂಗು ಒರೆಸಿಕೊಳ್ಳುತ್ತಾಳೆ, ಎಂಬಿವೇ ಮೊದಲಾದವುಗಳನ್ನು ತೋರಿಸಿದರು. ಎಲ್ಲರೂ, ''ಹೋ! ಹೋ!'' ಎಂದು ನಗಲಾ ರಂಭಿಸಿದರು. ಪಲ್ಟು ನಗುತ್ತಾ ನೆಲದ ಮೇಲೆ ಹೊರಳಾಡುತ್ತಿದ್ದಾನೆ *(ಶ್ರೀರಾಮಕೃಷ್ಣ ವಚನವೇದ ಸಂ. ೨, ಪು. ೨೩೭).*

**೬) ಸೌಂದರ್ಯ ಪ್ರಜ್ಞೆ:** ಗದಾಧರನು ಏಳು ವರ್ಷ ಬಾಲಕ ನಾಗಿದ್ದಾಗಲೇ ಅವನ ಸೌಂದರ್ಯ ಪ್ರಜ್ಞೆ ಪೂರ್ಣವಾಗಿ ವಿಕಸನ ಗೊಂಡಿತ್ತು. ಆ ಪುಟ್ಟ ಹೃದಯದಲ್ಲಿ ಕವಿಯೊಬ್ಬ ಆಗಲೇ ಮನೆ ಮಾಡಿದ್ದ. ಶುದ್ಧಗಾಳಿಯಿಂದ ಓಲಾಡುವ ಹಸಿರು ವನರಾಶಿ, ನದಿಯ ನಿರಂತರ ಪ್ರವಾಹ, ಹಕ್ಕಿಗಳು ಚಿಲಿಪಿಲಿಗಾನ ಮತ್ತು ನೀಲಾಕಾಶ ಮುಂತಾದ ಸುಂದರ ದೃಶ್ಯಗಳು ಪ್ರಕೃತಿಯ ಅದ್ಭುತ ಮಹಿಮೆಯನ್ನು ಹೊರಸೂಸಿ ಅವನ ಮನಸ್ಸನ್ನು ಸೂರೆಗೊಂಡಾಗ ಅವನು ಯಾವುದೊ ಭಾವರಾಜ್ಯದಲ್ಲಿ ವಿಹರಿಸುತ್ತಿದ್ದ.

ಒಮ್ಮೆ ಅವನು ಹಸಿರು ಗದ್ದೆಗಳ ನಡುವಿನ ಬದುವಿನ ಮೇಲೆ ಮಂಡಕ್ಕಿ ತಿನ್ನುತ್ತಾ ನಡೆದು ಹೋಗುತ್ತಿದ್ದ. ನೋಡ ನೋಡು ತ್ತಿರುವಂತೆಯೇ ಒಂದು ದಟ್ಟವಾದ ಕಪ್ಪು ಮೋಡ ಆಕಾಶಕ್ಕೆಲ್ಲಾ ಹರಡಿತು. ಅದೇ ಸಮಯದಲ್ಲಿ ಹಿಮದಂತೆ ಬೆಳ್ಳಗಿದ್ದ ಕೊಕ್ಕರೆಗಳು ಸಾಲು ಸಾಲಾಗಿ ಹಾರಿಹೋದವು. ಅದೊಂದು ಮನ ಮೋಹಕ ದೃಶ್ಯವಾಗಿತ್ತು. ಬಾಲಕನ ಮನಸ್ಸು ಅದರಲ್ಲೇ ತಲ್ಲೀನವಾಗಿ, ಬಾಹ್ಯಪ್ರಜ್ಞೆ ತಪ್ಪಿ ಉರುಳಿಬಿದ್ದ. ಈ ಘಟನೆ ಕುರಿತು ಗದಾಧರ ಮತ್ತೆ ಮತ್ತೆ ಹೇಳುತ್ತಿದ್ದ, ''ನಾನು ಆಗ ಒಂದು ಹೊಸಭಾವದಲ್ಲಿ ಲೀನನಾಗಿದ್ದೆ, ಹೊರಗಡೆ ಪ್ರಜ್ಞೆ ಇಲ್ಲದಂತೆ ಕಂಡರೂ ಒಳಗಡೆ ಅಪಾರ ಆನಂದವನ್ನು ಅನುಭವಿಸುತ್ತಿದ್ದೆ'' ಎಂದು. *(ಶ್ರೀರಾಮ ಕೃಷ್ಣರ ಲೀಲಾಪ್ರಸಂಗ, ಸಂ. ೧, ಪು.೪೯)*

ಮುಂದೆ ವಿವಾಹವಾಗಿ ದೇವಾಲಯದ ಅರ್ಚಕರಾಗಿದ್ದಾಗಿನ ಘಟನೆ. ಶ್ರೀಶಾರದಾದೇವಿಯವರು ಒಮ್ಮೆ ಒಂದು ಮಲ್ಲಿಗೆ ಹೂವಿನ ಹಾರವನ್ನು ತಯಾರಿಸಿ ಕಾಳಿ ದೇವಾಲಯಕ್ಕೆ ಕಳುಹಿಸಿ ದರು. ಶ್ರೀರಾಮಕೃಷ್ಣರು ಅಂದು ಮಂದಿರಕ್ಕೆ ಹೋದಾಗ ಕಾಳೀ ದೇವಿಯ ಕೊರಳಿನಲ್ಲಿ ಶೋಭಿಸುತ್ತಿದ್ದ ಆ ಹಾರವನ್ನು ನೋಡಿ ಭಾವಪರವಶರಾಗಿ ಹೇಳಿದರು, ''ಕಪ್ಪು ಬಣ್ಣಕ್ಕೆ ಎಷ್ಟು ಚೆನ್ನಾಗಿ ಹೊಂದಿಕೆಯಾಗುತ್ತದೆ ಇದು!'' ಎಂದು. ಶ್ರೀಮಾತೆಯವರೇ ಹಾರ ಮಾಡಿರುವುದೆಂದು ತಿಳಿದು ಅವರಿಗೆ ಬಂದು ನೋಡಬೇಕೆಂದು ಹೇಳಿಕಳುಹಿಸಿದರು. ಶಾರದಾದೇವಿಯವರು ಕೆಲಸದಾಕೆ ಬೃಂದೆ ಯೊಡನೆ ಬಂದು ತಮಗೆ ತೃಪ್ತಿಯಾಗುವಷ್ಟು ಕಾಳಿಯನ್ನು ನೋಡಿ ಆನಂದಿಸಿದರು. *('ಶ್ರೀಮಾತೆ ಶಾರದಾದೇವಿ', ಸ್ವಾಮಿ ನಿತ್ಯಸ್ಥಾ ನಂದ, ಪು.೮೮)*

ಹೀಗೆ ಅವರಲ್ಲಿ ಚಿಕ್ಕ ಚಿಕ್ಕ ವಿಷಯಗಳಲ್ಲೂ ಸೌಂದರ್ಯವನ್ನು ಕಾಣುವ ಪ್ರಜ್ಞೆ ವಿಕಸಿತವಾಗಿತ್ತು.

**೭) ನೃತ್ಯಕಲೆ:** ಶ್ರೀರಾಮಕೃಷ್ಣರ ನೃತ್ಯಕಲೆಯ ಕುರಿತು ಸ್ವಾಮಿ ಶಾರದಾನಂದರೇ ಹೀಗೆಂದು ಬರೆಯುತ್ತಾರೆ: ''ನಾವು ಅನೇಕ ಬಗೆಯ ನೃತ್ಯವನ್ನು ಕಂಡಿದ್ದೇವೆ. ಆದರೆ ಎಂದೂ ಇಂಥ ಒಂದು ಶಕ್ತಿಸೌಂದರ್ಯಗಳ ಮನೋಜ್ಞ ಸಮ್ಮಿಲನವನ್ನು ಕಂಡಿರಲಿಲ್ಲ.'' ಭಕ್ತರೊಡನೆ ಕಲೆತು ಭಾವಾವೇಶದಲ್ಲಿ ಮೈಮರೆತು ನರ್ತನ ಮಾಡುವುದು ಶ್ರೀರಾಮಕೃಷ್ಣರ ನಿತ್ಯಕ್ರಿಯೆಯಾಗಿಬಿಟ್ಟಿತು. ಕೆಲವೊಮ್ಮೆ ಗೌರಾಂಗನೇ ಶ್ರೀವಾಸನ ಮನೆಯಲ್ಲಿ ಭಕ್ತರೊಡನೆ ನರ್ತಿಸುತ್ತಿರುವನೋ ಎಂಬಂತೆ ಅದ್ಭುತ ನೃತ್ಯವೇ ಆಗಿರುತ್ತಿತ್ತು.

ಪಾಣಿಹಾಟಿಯ ಅವಲಕ್ಕಿ ಉತ್ಸವ ಸುಪ್ರಸಿದ್ಧ. ಅಲ್ಲಿ ಆ ದಿನ ಆನಂದದ ಮೇಳ ನಡೆಯುತ್ತದೆ. ಹರಿನಾಮದ ಪ್ರವಾಹವೇ ಹರಿಯುತ್ತದೆ. ಶ್ರೀರಾಮಕೃಷ್ಣರು ಅನೇಕ ಬಾರಿ ಆ ಉತ್ಸವದಲ್ಲಿ ಭಾಗವಹಿಸಿದ್ದರು. ಆದರೆ ಈ ಬಾರಿ ಗಂಟಲುಬೇನೆಯಿಂದ ನರಳುತ್ತಿದ್ದರೂ, ವೈದ್ಯರ ಎಚ್ಚರಿಕೆ ಇದ್ದರೂ ಭಕ್ತರೊಡನೆ ಉತ್ಸವಕ್ಕೆ ಹೋದರು. ಅಲ್ಲಿ ತಾವು ಸಮಾಧಿಸ್ಥರಾಗುವುದಿಲ್ಲವೆಂದು ಭಕ್ತರಿಗೆ ನೀಡಿದ ಭಾಷೆಯನ್ನು ಮರೆತರು. ''ಅರ್ಧಬಾಹ್ಯದೆಶೆಯಲ್ಲಿ ಸಿಂಹ ವಿಕ್ರಮದಿಂದ ನರ್ತಿಸುತ್ತಿದ್ದರು ಮತ್ತು ಕೆಲವೊಮ್ಮೆ ಸಂಪೂರ್ಣ ಪ್ರಜ್ಞೆಯನ್ನು ಕಳೆದುಕೊಂಡು ಸ್ಥಿರವಾಗಿ ನಿಂತುಬಿಡುತ್ತಿದ್ದರು... ಲಯಬದ್ಧವಾಗಿ ಹಿಂದೆ ಮುಂದೆ ಚಲಿಸುವುದನ್ನು ನೋಡಿದಾಗ ಆನಂದ ಸಾಗರದಲ್ಲಿ ಆನಂದದಿಂದ ಮೀನು ಈಜುತ್ತಿರುವಂತೆ ಕಾಣುತ್ತಿತ್ತು. ಅವರ ಪ್ರತಿಯೊಂದು ಚಲನೆಯೂ ಅದನ್ನು ಸೂಚಿಸುತ್ತಿತ್ತು ... ಅದರಲ್ಲಿ ಸೌಂದರ್ಯ ಮತ್ತು ಮಾರ್ದವತೆಗಳ ಮಧುರ ಸಾಮರಸ್ಯವಿತ್ತು...ದಿವ್ಯಭಾವದ ಆನಂದದಿಂದ ತುಂಬಿಕೊಳ್ಳುತ್ತಿದ್ದ ಅವರ ದೇಹವು ಅತ್ತಿತ್ತ ಓಲಾಡುವುದನ್ನು ನೋಡಿದಾಗ ಅದು ಘನದ್ರವ್ಯದಿಂದ ನಿರ್ಮಿತವಾಗಿದೆಯೇ ಇಲ್ಲವೆ ಎಂದು ಆಶ್ಚರ್ಯ ಪಡುವಂತಿತ್ತು. ಪರ್ವತಾಕಾರದ ಅಲೆಯು ಎದ್ದು ಅದು ಎಲ್ಲವನ್ನೂ ಕೊಚ್ಚಿಕೊಂಡು ಹೋಗುತ್ತಿರುವಂತೆ ಅನ್ನಿಸುತ್ತಿತ್ತು .''

*(ಶ್ರೀರಾಮಕೃಷ್ಣರ ಲೀಲಾ ಪ್ರಸಂಗ, ಸಂ. ೨, ಪು.೩೮೭)*

**೮) ಸಂಗೀತಕಲೆ:** ಶ್ರೀರಾಮಕೃಷ್ಣರು ಸ್ವತಃ ಹಾಡುತ್ತಿದ್ದುದಲ್ಲದೆ, ಇತರರು ಹಾಡುವುದನ್ನು ಆಸ್ವಾದಿಸುತ್ತಿದ್ದರು. ವೈಷ್ಣವರ ಮನೆಗಳಲ್ಲಿ ಪ್ರತಿದಿನ ನಡೆಯುತ್ತಿದ್ದ ಸಂಕೀರ್ತನೆಯನ್ನು ಕೇಳಿ ಬಾಲಕ ಗದಾಧರ ಗಾನಸಂಕೀರ್ತನೆಗಳನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದ. ನೆರೆಹೊರೆಯ ಹೆಂಗಸರು ತಮ್ಮ ಮನೆಕೆಲಸಗಳನ್ನು ಬೇಗ ಬೇಗನೆ ಮುಗಿಸಿ ಗದಾಧರನು ಹಾಡುವುದನ್ನು ಕೇಳಲು ಚಂದ್ರಮಣೀದೇವಿಯ ಮನೆಗೆ ಬರುತ್ತಿದ್ದರು. ಅವರುಗಳಿಗೆ ಆನಂದ ನೀಡಲು ಹಾಡುವುದು ಗದಾಧರನ ನಿತ್ಯದ ಕೆಲಸಗಳಲ್ಲಿ ಒಂದಾಗಿ ಹೋಗಿತ್ತು.

ಮುಂದೆ ಕಾಳೀದೇವಾಲಯದ ಅರ್ಚಕರಾಗಿದ್ದಾಗ, ಬಿಡುವಿನ ಸಮಯದಲ್ಲಿ ದೇವಿಯ ಸಂತೋಷಕ್ಕಾಗಿ ಕೀರ್ತನೆಗಳನ್ನು ಹಾಡುತ್ತಿದ್ದರು. ಭಾವದಿಂದ ತುಂಬಿ ಹರಿಯುವ ಅವರ ಆ ಮಧುರಗಾನ ಎಲ್ಲರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದವು! ಒಮ್ಮೆ ಕೇಳಿದವರು ಮರೆಯುವಂತಿರಲಿಲ್ಲ. ಸಂಗೀತ ವಿದ್ವಾಂಸರ ಯಾವ ಆಡಂಬರವು ಇರದಿದ್ದರೂ, ಹಾಡಿನ ಭಾವವನ್ನು ಅವರು ಸಂಪೂರ್ಣ ಅನುಭವಿಸುತ್ತಾ ರಾಗ-ತಾಳಬದ್ಧವಾಗಿ ಹಾಡುತ್ತಿದ್ದರು. ಸಂಗೀತದ ಉಸಿರೇ ಭಾವ, ಯಾವ ಭಾವವನ್ನು ಕಾವ್ಯದಲ್ಲಿ ವಿವರಿಸಲು ಹಲವು ವಾಕ್ಯಗಳು ಬೇಕಾಗಬಹುದೊ ಅದನ್ನು ಒಂದು ಪದದ ಉಚ್ಚಾರಣೆಯಿಂದಲೇ ನಮ್ಮ ಮನಸ್ಸಿನಲ್ಲಿ ಸ್ಫುರಿಸುವಂತೆ ಮಾಡಬಲ್ಲದು ಸಂಗೀತ.

ರಾಮಪ್ರಸಾದ, ಕಮಲಾಕಾಂತ ಕವಿಗಳು ರಚಿಸಿದ ಹಾಡುಗಳು ಬಹುಪ್ರಿಯವಾಗಿದ್ದವು. ಅವರಿಗೆ ಭಕ್ತರು ಏರ್ಪಡಿಸುತ್ತಿದ್ದ ಸಂತೋಷಕೂಟಗಳಲ್ಲಿ ತಾವೇ ಸ್ವತಃ ಪ್ರೇಮೋನ್ಮತ್ತರಾಗಿ ಹಾಡುತ್ತಾ ನರ್ತಿಸುತ್ತಿದ್ದುದಲ್ಲದೆ ಕೀರ್ತನಕಾರರನ್ನು, ಸಂಗೀತ ವಿದ್ವಾಂಸರನ್ನು ಕರೆಸಿ ಹಾಡಿಸುತ್ತಿದ್ದರು. ಭಗವಂತನ ನಾಮಗುಣಕೀರ್ತನೆಗಳನ್ನು ಹಾಡುವುದು, ಕೇಳುವುದು, ನರ್ತಿಸುವುದು ಪರಮಹಂಸರಿಗೆ ತುಂಬಾ ಆನಂದವುಂಟುಮಾಡುತ್ತಿತ್ತು. ರಾಣಿ ರಾಸಮಣಿಗೂ ಶ್ರೀರಾಮಕೃಷ್ಣರ ಸುಶ್ರಾವ್ಯ, ಮಧುರ ಹಾಡುಗಳನ್ನು ಕೇಳಲು ಇಚ್ಛೆ. ಆದ್ದರಿಂದ ದಕ್ಷಿಣೇಶ್ವರಕ್ಕೆ ಬಂದಾಗಲೆಲ್ಲಾ ಅವರನ್ನು ಕರೆಸಿ ಹಾಡಿಸುತ್ತಿದ್ದಳು.

ಒಂದು ರಾತ್ರಿ ದಕ್ಷಿಣೇಶ್ವರದಲ್ಲಿ ಶ್ರೀಶಾರದಾದೇವಿಯವರು ಹಾಗೂ ಲಕ್ಷ್ಮೀದೇವಿ ಮೃದು ಸ್ವರದಲ್ಲಿ ಅತ್ಯಂತ ಭಾವಪೂರ್ಣವಾಗಿ ಹಾಡುತ್ತಿದ್ದರು. ಶ್ರೀಮಾತೆ ಚೆನ್ನಾಗಿ ಹಾಡಬಲ್ಲವರಾಗಿದ್ದರು. ಅವರ ಹಾಡನ್ನು ಕೇಳಿ ಶ್ರೀರಾಮಕೃಷ್ಣರಿಗೆ ಮಹದಾನಂದವಾಯಿತು. ಮರುದಿನ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ, ''ನಿನ್ನೆ ನೀವಿಬ್ಬರೂ ಬಹಳ ಚೆನ್ನಾಗಿ ಹಾಡುತ್ತಿದ್ದಿರಿ, ಭೇಷ್! ಭೇಷ್!''ಎಂದರು.

**ಉಪಸಂಹಾರ:** ಗದಾಧರ ಎಲ್ಲಿ ಹೋದರೂ ಅಲ್ಲಿ ಆನಂದದ ಪ್ರವಾಹ ಹರಿಯುತ್ತಿತ್ತು. ಏಕೆಂದರೆ ಅವನಷ್ಟು ಸೊಗಸಾಗಿ, ಭಕ್ತಿಪೂರ್ಣವಾಗಿ ಪುರಾಣಪಠಣ ಮತ್ತು ಧರ್ಮತತ್ತ್ವಗಳನ್ನು ವ್ಯಾಖ್ಯಾನ ಮಾಡುವವರು ಯಾರೂ ಇರಲಿಲ್ಲ. ಅವನಂತೆ ಭಾವಪೂರ್ಣವಾಗಿ ಹಾಡುವವರಾಗಲಿ, ಆಶುಕವಿತೆ ಕಟ್ಟುವವರಾಗಲಿ, ಅವನಂತೆ ನರ್ತಿಸುವವರಾಗಲಿ ಬೇರೆ ಯಾರೂ ಇರಲಿಲ್ಲ. ಅವನ ಕಂಠಶ್ರೀ ಮತ್ತಾರಿಗೂ ಇರಲಿಲ್ಲ ಅವನಿಗಿದ್ದಂತಹ ಹಾಸ್ಯಮಯ ಪ್ರವೃತ್ತಿಯೂ ಯಾರಿಗೂ ಇರಲಿಲ್ಲ. ಹಾಸ್ಯ-ನುಡಿ, ಅನುಕರಣೆ ಇತ್ಯಾದಿಗಳ ಮೂಲಕ ಜನರನ್ನು ನಗೆಗಡಲಿನಲ್ಲಿ ತೇಲಿಸಿಬಿಡುತ್ತಿದ್ದ. ಅಂತರಂಗಿಕವಾಗಿ, ಆಧ್ಯಾತ್ಮಿಕವಾಗಿ ಪರಿಪೂರ್ಣತೆ ಪಡೆದವರು ಪ್ರತಿಯೊಂದು ಕಲೆಯಲ್ಲೂ ಆ ಪರಿಪೂರ್ಣತೆಯನ್ನು ವ್ಯಕ್ತಗೊಳಿಸುತ್ತಾರೆ. ಶ್ರೀರಾಮಕೃಷ್ಣರಲ್ಲಿ ಆಧ್ಯಾತ್ಮಿಕತೆ ಜನ್ಮತಃ ಜಾಗೃತವಾಗಿದ್ದುದರಿಂದ ಎಲ್ಲ ಕಲೆಗಳಲ್ಲೂ ಪರಿಪೂರ್ಣತೆ ವ್ಯಕ್ತವಾಯಿತು. ❖